# <u>ಸ್ವರ್ಣ ಜಯಂತಿ ಶಹರಿ ರೋಜ್ ಗಾರ್ ಯೋಜನೆ</u>

**ಸ್ವರ್ಣ ಜಯಂತಿ ಶಹರಿ ರೋಜ್ ಗಾರ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿಯಲ್ಲಿ ಈ ಕೆಳಕಂಡ 6 ಉಪ ಕಾರ್ಯಕ್ರಮಗಳಿರುತ್ತದೆ.**

1. **<u>ME</u>**- ಬಿಪಿಎಲ್ ಕುಟುಂಬಗಳ ಸದಸ್ಯರಿಗೆ ನಗರ ಸ್ವಯಂ ಉದ್ಯೋಗ ಕಲ್ಪಿಸುವುದು. ಇದರಲ್ಲಿ ರೂ. 50000-00 ಬ್ಯಾಂಕ್ ಸಾಲ ಇದರಲ್ಲಿ ಎಸ್ ಜೆ ಎಸ್ ಆರ್ ವೈ ಶೇ 15 ರಷ್ಟು ಸಹಾಯಧನ, ಶೇ 5 ರಷ್ಟು ಮಾರ್ಜಿನ್ ಮನಿ ಇರುತ್ತದೆ.
2. **<u>DWACUA</u>**- (ನಗರ ಪ್ರದೇಶದಲ್ಲಿ ಮಹಿಳೆರ ಮತ್ತು ಮಕ್ಕಳ ಅಭಿವೃದ್ಧಿ) – ಈ ಕಾರ್ಯಕ್ರದಲ್ಲಿ ಮಹಿಳಾ ಸಂಘಗಳ ಗುಂಪು ಚಟುವಟಿಕೆ ಕಾರ್ಯಕ್ರಮದಿಂದ ಅಭಿವೃದ್ಧಿ ಪಡೆಯುವುದು.
3. TCG- (ನಿರಂತರ ಉಳಿತಾಯ ಗುಂಪು)- ಈ ಕಾರ್ಯಕ್ರಮದಡಿ 10 ರಿಂದ 20 ಮಹಿಳಾ ಸದಸ್ಯರು ಸೇರಿ ಗುಂಪು ರಚಿಸಿ ಉಳಿತಾಯ ಮಾಡಿ ಈ ಉಳಿತಾಯದಲ್ಲಿ ಆಂತರಿಕ ಸಾಲ ತೆಗೆದುಕೊಂಡು ಗುಂಪು ನಡೆಸುವುದು.
4. **<u>ತರಭೇತಿ</u>**- ಈ ಕಾರ್ಯಕ್ರಮದಡಿ ಬಿಪಿಎಲ್ ಕುಟುಂಬಗಳ ಮಕ್ಕಳಿಗೆ ವೃತ್ತಿ ಕೌಶಲ್ಯ ತರಭೇತಿ ನೀಡುವುದು.
5. **<u>CSC</u>**- (ಸಾಮಾಜಿಕ ಸೇವಾ ಘಟಕ)- ಈ ಕಾರ್ಯಕ್ರಮದಡಿ ಬಿಪಿಎಲ್ ಕುಟುಂಬಗಳ ಮಕ್ಕಳು ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳಿಗೆ ಹಾಗೂ ಅಂಗನವಾಡಿ ಮಕ್ಕಳಿಗೆ ಮಣೆಗಳನ್ನು ಖರೀದಿಸಿ ನೀಡುವುದು, ಸಮವಸ್ತ್ರ ನೀಡುವುದ ಆಟಿಕೆ ಸಾಮಾಗ್ರಿ, ಪೀಠೋಪಕರಣಗಳನ್ನು ನೀಡುವುದು, ಇತ್ಯಾದಿ.
6. **<u>UWEP</u>**-(ನಗರ ಕೂಲಿ ಉದ್ಯೋಗ)- ನಗರದ ಸ್ಲಂ ಮತ್ತು ಬಿಪಿಎಲ್ ಬೀದಿಗಳಿಗೆ ಕಾಮಗಾರಿ ನಿರ್ವಹಣೆ, ಅಂಗನವಾಡಿ ಕಟ್ಟಡ, ಶೌಚಾಲಯ ವ್ಯವಸ್ಥೆ, ಡ್ರೈನ್ ಸ್ಲಾಬ್ ರಸ್ತೆ, ನಿರ್ವಹಣಾ ಕೆಲಸ ಮಾಡುವುದು.

ಗಾಂಧಿನಗರದಲ್ಲಿ- ಗಾಂಧಿನಗರ ಮತ್ತು ಕಾಯಿಸೊಪ್ಪಿನ ಬೀದಿಗಳಿಗೆ ಹೊಂದಿಕೊಂಡಿರುವ ಬಿಪಿಎಲ್ ಕುಟುಂಬಗಳಿಗೆ ಸಮುದಾಯ ಶೌಚಾಲಯ ಮತ್ತು ಸ್ನಾನ ಗೃಹ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಅಂದಾಜು – ರೂ. 9.90 ಲಕ್ಷ ಈ ಪೈಕಿ Part Payment ರೂ. 2.70 ಲಕ್ಷ ಬಿಲ್ ಆಗಿರುತ್ತದೆ.